ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 16–09–2021

# ಮಾಧ್ಯಮ ಆಹ್ವಾನ
# Media Invitation

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಎಲ್ಲಾ 9 ವಾರ್ಡ್‌ಗಳ ವಿವಿಧ ಸ್ಥಳಗಳಲ್ಲಿ ಬಿ.ಬಿ.ಎಂ.ಪಿ ಸಹಯೋಗದೊಂದಿಗೆ ಉಚಿತ ಕೋವಿಡ್–19 ಮೆಗಾ ಲಸಿಕಾ ಅಭಿಯಾನ

ಅಭಿಯಾನದ ಚಾಲನೆ:
ವಿ.ಸೋಮಣ್ಣ
ಮಾನ್ಯ ವಸತಿ ಸಚಿವರು ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ದಿನಾಂಕ: 17–09–2021, ಶುಕ್ರವಾರ, ಸಮಯ: ಬೆಳಿಗ್ಗೆ 07.30 ಗಂಟೆಗೆ ಆರಂಭ

ಸ್ಥಳ: 1. ವಾರ್ಡ್ ನಂ.106, ಡಾ.ರಾಜ್‌ಕುಮಾರ್ ವಾರ್ಡ್, ಸಮುದಾಯ ಭವನ, 6ನೇ ಬ್ಲಾಕ್ ರಾಜಾಜಿನಗರ – ಬೆಳಿಗ್ಗೆ: 7.30 ಗಂಟೆಗೆ
2. ವಾರ್ಡ್ ನಂ.105, ಅಗ್ರಹಾರ ದಾಸರಹಳ್ಳಿ ವಾರ್ಡ್, ವಾರ್ಡ್ ಕಚೇರಿ – ಬೆಳಿಗ್ಗೆ : 7.40 ಗಂಟೆಗೆ
3. ವಾರ್ಡ್ ನಂ.104, ಗೋವಿಂದರಾಜನಗರ ವಾರ್ಡ್, ವಾರ್ಡ್ ಕಚೇರಿ – ಬೆಳಿಗ್ಗೆ : 7.50 ಗಂಟೆಗೆ
4. ವಾರ್ಡ್ ನಂ.103, ಕಾವೇರಿಪುರ ವಾರ್ಡ್, ಸನ್‌ರೈಸ್ ಪ್ಯಾಕ್ಟರಿ, 4ನೇ ಮುಖ್ಯ ರಸ್ತೆ, ಕಾವೇರಿಪುರ – ಬೆಳಿಗ್ಗೆ : 8.00 ಗಂಟೆಗೆ
5. ವಾರ್ಡ್ ನಂ.125, ಮಾರೇನಹಳ್ಳಿ ವಾರ್ಡ್, ವಾರ್ಡ್ ಕಚೇರಿ – ಬೆಳಿಗ್ಗೆ : 8.10 ಗಂಟೆಗೆ
6. ವಾರ್ಡ್ ನಂ.126, ಮಾರುತಿ ಮಂದಿರ ವಾರ್ಡ್, ಕನಕನಗರ ಆಸ್ಪತ್ರೆ – ಬೆಳಿಗ್ಗೆ : 8.20 ಗಂಟೆಗೆ
7. ವಾರ್ಡ್ ನಂ.127, ಮೂಡಲಪಾಳ್ಯ ವಾರ್ಡ್, ಜ್ಞಾನಸೌಧ, ಕಲ್ಯಾಣನಗರ – ಬೆಳಿಗ್ಗೆ : 8.30 ಗಂಟೆಗೆ
8. ವಾರ್ಡ್ ನಂ.128, ನಾಗರಬಾವಿ ವಾರ್ಡ್, ವಾರ್ಡ್ ಕಚೇರಿ – ಬೆಳಿಗ್ಗೆ : 8.40 ಗಂಟೆಗೆ
9. ವಾರ್ಡ್ ನಂ.131, ನಾಯಂಡಹಳ್ಳಿ ವಾರ್ಡ್, ಐ.ಟಿ.ಐ ಲೇಔಟ್, ಶ್ರೀ ಗಣೇಶ ದೇವಸ್ಥಾನ – ಬೆಳಿಗ್ಗೆ : 9.00 ಗಂಟೆಗೆ

2. ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ – 2023 ರ ಉದ್ಘಾಟನೆ

ಅಧ್ಯಕ್ಷತೆ:
ಕೈಲಾಶ್ ಚೌಧರಿ,
ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವರು.

ಉದ್ಘಾಟನೆ :
ಡಾ॥ ಎಸ್ ರಾಜೇಂದ್ರ ಪ್ರಸಾದ್,
ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.

ದಿನಾಂಕ: 17–09–2021, ಶುಕ್ರವಾರ, ಸಮಯ: ಬೆಳಿಗ್ಗೆ 10.00 ಗಂಟೆಗೆ

ಸ್ಥಳ: ಕುವೆಂಪು ಸಭಾಂಗಣ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿ.ಕೆ.ವಿ.ಕೆ), ಬೆಂಗಳೂರು.

# ಪತ್ರಿಕಾ ಪ್ರಕಟಣೆ

**PRESS RELEASE**

**ವಿದ್ಯುತ್ ಕಂಪನಿ ಖಾಸಗೀಕರಣಗೊಳಿಸುವ ಚಿಂತನೆ ಸರ್ಕಾರಕ್ಕೆ ಇಲ್ಲ : ವಿ.ಸುನಿಲ್ ಕುಮಾರ್**

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

ವಿದ್ಯುತ್ ಕಂಪನಿಯನ್ನು ಖಾಸಗೀಕರಣಗೊಳಿಸುವ ಚಿಂತನೆ ಸರ್ಕಾರದ ಮುಂದೆ ಇಲ್ಲ ಎಂದು ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದರು.

ಅವರು ಇಂದು ನಡೆದ ವಿಧಾನಸಭೆ ಅಧಿವೇಶನದ ಪ್ರಶ್ನೋತ್ತರ ವೇಳೆಯಲ್ಲಿ ವಿಧಾನಸಭೆ ಸದಸ್ಯ ಯಶವಂತರಾಯ ಗೌಡ ವಿಠ್ಠಲಗೌಡ ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರೈತರ ನೀರಾವರಿ ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಕೆ ಮಾಡುವ ಪ್ರಸ್ತಾವನೆ ಸದ್ಯ ಸರ್ಕಾರದ ಮುಂದೆ ಇಲ್ಲ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ನೂತನ ಯೋಜನೆಯಾದ Revamped Distribution Sector Scheme (RDSS) ಯೋಜನೆಯಲ್ಲಿ ಮೀಟರ್ ಅಳವಡಿಕೆಯು ಒಂದು ಘಟಕವಾಗಿದ್ದು, ಈ ಯೋಜನೆಯಲ್ಲಿ ವಿದ್ಯುತ್ ಜಾಲದ ಬಲವರ್ಧನೆ ಹಾಗೂ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸುವುದರೊಂದಿಗೆ ಗ್ರಾಹಕರಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆ, ಎಟಿ&ಸಿ (AT&C) ನಷ್ಟವನ್ನು ಶೇ.12.15 ವರೆಗೆ ಕಡಿಮೆಗೊಳಿಸುವುದು ಹಾಗೂ ಯೋಜನಾ ಅವಧಿಯಲ್ಲಿ ಎಸಿಸಿ-ಎಆರ್‌ಆರ್ ಅಂತರವನ್ನು ಶೂನ್ಯಕ್ಕೆ ಇಳಿಸುವ ಉದ್ದೇಶ ಹೊಂದಿದೆ.

ಈ ಯೋಜನೆಯ ಮಾರ್ಗ ಸೂಚಿಯನ್ವಯ ಪ್ರೀಪೇಯ್ಡ್ ಸ್ಮಾರ್ಟ್ ಮೀಟರ್‌ಗಳನ್ನು ಮೊದಲನೇ ಹಂತದಲ್ಲಿ ಶೇಕಡ. 15 ಕ್ಕಿಂತ ಅಧಿಕ ಎಟಿ&ಸಿ (AT&C) ನಷ್ಟವಿರುವ ಅಮೃತ ನಗರ-ಪಟ್ಟಣಗಳಲ್ಲಿ, ಕೈಗಾರಿಕಾ ಹಾಗೂ ವಾಣಿಜ್ಯ ಗ್ರಾಹಕರಿಗೆ ಎಲ್ಲಾ ತಾಲ್ಲೂಕು ಮಟ್ಟದ ಮತ್ತು ಮೇಲ್ಪಟ್ಟ ಸರ್ಕಾರಿ ಕಛೇರಿಗಳಿಗೆ ಹಾಗೂ ಹೆಚ್ಚು ಎಟಿ&ಸಿ (AT&C) ನಷ್ಟವಿರುವ ಪ್ರದೇಶಗಳಲ್ಲಿ ಪ್ರೀ ಪೇಯ್ಡ್ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸುವ ಚಿಂತನೆ ನಡೆಸಲಾಗಿದೆ ಎಂದು ಸದನಕ್ಕೆ ಮಾಹಿತಿ ನೀಡಿದರು.

**ಟ್ರಾನ್ಸ್‌ಫಾರ್ಮರ್‌ಗಳ ಉತ್ತಮ ನಿರ್ವಹಣೆಗಾಗಿ ಆ್ಯಪ್ ಅಭಿವೃದ್ಧಿ : ವಿ.ಸುನಿಲ್ ಕುಮಾರ್**

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

ರಾಜ್ಯದಲ್ಲಿನ ಟ್ರಾನ್ಸ್‌ಫಾರ್ಮರ್‌ಗಳ ನಿರ್ವಹಣೆಗಾಗಿ ಆ್ಯಪ್ ಅಭಿವೃದ್ಧಿಪಡಿಸಲು ಯೋಜಿಸಲಾಗಿದ್ದು, 24 ಗಂಟೆಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಿಸುವಂತೆ ಸೂಚನೆ ನೀಡುವುದು ಸೇರಿದಂತೆ ಒಟ್ಟಾರೆ ನಿರ್ವಹಣೆಯನ್ನು ಸುಗಮಗೊಳಿಸಲು ಉದ್ದೇಶಿಸಲಾಗಿದೆ ಎಂದು ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದರು.

ಅವರು ಇಂದು ನಡೆದ ವಿಧಾನಸಭೆ ಅಧಿವೇಶನದ ಪ್ರಶ್ನೋತ್ತರ ವೇಳೆಯಲ್ಲಿ ವಿಧಾನಸಭೆ ಸದಸ್ಯ ಜಿ.ಕರುಣಾಕರ ರೆಡ್ಡಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಟಿಸಿ ಬ್ಯಾಂಕ್ ನಿರ್ಮಾಣ, ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರ, ಟ್ರಾನ್ಸ್‌ಫಾರ್ಮರ್ ಬದಲಿಸುವ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ. ಬೆಂಗಳೂರು ವಿದ್ಯತ್ ಸರಬರಾಜು ಕಂಪನಿಯು ಯಾವುದೇ ರೀತಿ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ, ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ನಿರಂತರ ವಿದ್ಯುತ್ ಸರಬರಾಜು ಮಾಡುತ್ತಿದೆ ಎಂದು ಸದನಕ್ಕೆ ಮಾಹಿತಿ ನೀಡಿದರು.

**ರಸ್ತೆ ಬದಿ ಮರಗಳ ತೆರವಿಗೆ ಅಗತ್ಯ ಕ್ರಮ : ಸಚಿವ ಉಮೇಶ್ ವಿ.ಕತ್ತಿ**

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

ರಾಜ್ಯದಲ್ಲಿ ರಸ್ತೆಗಳನ್ನು ಅಭಿವೃದ್ಧಿ ಮಾಡುವಾಗ ಕಾಮಗಾರಿಗೆ ಅಡ್ಡಿಯಾಗುವ ರಸ್ತೆ ಬದಿಯ ಮರಗಳನ್ನು ತೆರವುಗೊಳಿಸಲು ಕಾಲಮಿತಿಯೊಳಗೆ ಆದೇಶ ನೀಡಲಾಗುವುದು ಎಂದು ಅರಣ್ಯ ಹಾಗೂ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಉಮೇಶ್ ವಿ. ಕತ್ತಿ ಅವರು ಇಂದು ನಡೆದ ವಿಧಾನಸಭೆ ಅಧಿವೇಶನದ ಪ್ರಶ್ನೋತ್ತರ ವೇಳೆಯಲ್ಲಿ ವಿಧಾನಸಭೆ ಸದಸ್ಯ ಕೆ.ವೈ. ನಂಜೇಗೌಡ ಅವರ ಪ್ರಶ್ನೆಗೆ ಉತ್ತರ ನೀಡಿದರು.

## ಒಂದು ತಿಂಗಳೊಳಗೆ ಅಂತಿಮ ಜೇಷ್ಠತಾ ಪಟ್ಟಿ ಸಿದ್ಧಪಡಿಸಲಾಗುವುದು : ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ್

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರ (ಗ್ರೇಡ್–1 ಮತ್ತು ಗ್ರೇಡ್–2) ಅಂತಿಮ ಜೇಷ್ಠತಾ ಪಟ್ಟಿಯನ್ನು ಒಂದು ತಿಂಗಳೊಳಗೆ ಸಿದ್ಧಪಡಿಸಲಾಗವುದು ಎಂದು ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ್ ತಿಳಿಸಿದರು.

ಅವರು ಇಂದು ನಡೆದ ವಿಧಾನಸಭೆ ಅಧಿವೇಶನದ ಪ್ರಶ್ನೋತ್ತರ ವೇಳೆಯಲ್ಲಿ ವಿಧಾನಸಭೆ ಸದಸ್ಯ ಎಂ.ಪಿ. ಕುಮಾರಸ್ವಾಮಿ ಅವರ ಪ್ರಶ್ನೆಗೆ ಉತ್ತರ ನೀಡಿ, ಈ ಹಿಂದೆ ಹೊರಡಿಸಿದ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆ ಬಂದ ಕಾರಣ ಹಾಗೂ ಕೋವಿಡ್ ಹಿನ್ನಲೆಯಲ್ಲಿ ಜೇಷ್ಠತಾ ಪಟ್ಟಿ ಪ್ರಕಟಣೆಗೆ ವಿಳಂಬವಾಯಿತು ಎಂದು ಸದನಕ್ಕೆ ಮಾಹಿತಿ ಒದಗಿಸಿದರು.

## ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ವಿಧೇಯಕ ಮಂಡನೆ

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

2021ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕದ ಪ್ರಸ್ತಾವನೆಯನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವ ಬಿ.ಸಿ.ನಾಗೇಶ್ ಮಂಡಿಸಿದರು. ಪ್ರಸ್ತಾವನೆಯು ಎಲ್ಲರ ಸಹಮತದೊಂದಿಗೆ ಅಂಗೀಕೃತವಾಯಿತು.

**ಛಾಯಾಚಿತ್ರ ಶೀರ್ಷಿಕೆ:**

Shri Thaawarchand Gehlot, Hon’ble Governor of Karnataka launched Vidyashilp University & unveiled logo-brochure at ITC Gardenia. Dr. C.N. Ashwathnarayan, Hon’ble Minister for Higher Education, Prof B Thimmegowda, VC, KSHEC & Dr. P Dayananda Pai, Chancellor were also present.

ಇಂದು ನಗರದ ಐಟಿಸಿ ಗಾರ್ಡೇನಿಯಾದ ಸಭಾಂಗಣದಲ್ಲಿ ವಿದ್ಯಾಶಿಲ್ಪ್ ವಿಶ್ವವಿದ್ಯಾಲಯವನ್ನು ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕೆಎಸ್ ಹೆಚ್ ಇಸಿಯ ಕುಲಪತಿಗಳಾದ ಪ್ರೊ.ತಿಮ್ಮೇಗೌಡ, ವಿದ್ಯಾಶಿಲ್ಪ್ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಡಾ.ಪಿ ದಯಾನಂದ ಪೈ ಮುಂತಾದ ಗಣ್ಯರು ಉಪಸ್ಥಿತರಿದ್ದರು.

## ಮುಕ್ತ ವಿವಿಯಲ್ಲಿ ಪ್ರಸಕ್ತ ಸಾಲಿನಿಂದ ಕೌಶಲ ತರಬೇತಿ : ಕುಲಪತಿ ಪ್ರೊ. ಎಸ್. ವಿದ್ಯಾಶಂಕರ್

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

ಬೆಳ್ಳಿಹಬ್ಬ ಆಚರಿಸಿಕೊಳ್ಳುತ್ತಿರುವ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕೆಎಸ್‌ಒಯು)ದಲ್ಲಿ ಪ್ರಸಕ್ತ ಸಾಲಿನಿಂದ ವಿದ್ಯಾರ್ಥಿಗಳಿಗೆ ಕೌಶಲಾಭಿವೃದ್ಧಿ ತರಬೇತಿ ಕಾರ್ಯಕ್ರಮ ಆರಂಭವಾಗಲಿದೆ.

ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೋಮಾದಂತಹ ಶೈಕ್ಷಣಿಕ ಕಾರ್ಯಕ್ರಮಗಳನ್ನು ನೀಡುತ್ತಿರುವ ಮುಕ್ತ ವಿವಿಯು ವೃತ್ತಿ ನಡೆಸಲು ಅಥವಾ ಸ್ವಯಂ ಉದ್ಯೋಗ ಮೂಲಕ ಸ್ವಾಭಿಮಾನದ ಬದುಕು ನಡೆಸಲು ಸಹಕಾರಿಯಾಗುವಂತೆ ಕೌಶಲ ತರಬೇತಿ ನೀಡಲು ಮುಂದಾಗಿದೆ.

2021–22ನೇ ಸಾಲಿಗೆ ಮುಖ್ಯಮಂತ್ರಿಗಳ ಕೌಶಲ ಕರ್ನಾಟಕ ಯೋಜನೆ (ಸಿಎಂಕೆವೈಸಿ) ಯಡಿ ತರಬೇತಿ ಕಾರ್ಯಕ್ರಮ ಆರಂಭಿಸಲು 'ಕರ್ನಾಟಕ ಕೌಶಲಾಭಿವೃದ್ಧಿ ನಿಗಮ'ವು ತರಬೇತಿ ಸಂಸ್ಥೆಯ ಜಾಬ್‌ರೋಲ್‌ಗಳಿಗೆ ಅನುಗುಣವಾಗಿ ಒಡಂಬಡಿಕೆ ಮಾಡಿಕೊಂಡು ಆಗಸ್ಟ್ 25 ರಂದು 'ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ'ಕ್ಕೆ ಕಾರ್ಯಾದೇಶ ನೀಡಿದೆ. ಅಭ್ಯರ್ಥಿಗಳು ಮಾರ್ಗಸೂಚಿ ಅನುಸಾರ ಕೋವಿಡ್ ಲಸಿಕೆ ಮೊದಲ ಡೋಸ್ ಪಡೆದಿರುವುದನ್ನು ಖಚಿತಪಡಿಸಿಕೊಂಡು ಪ್ರಸಕ್ತ ಸಾಲಿನಿಂದಲೇ ತರಬೇತಿ ಆರಂಭಿಸುವಂತೆ ಕರ್ನಾಟಕ ಕೌಶಲಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮುಕ್ತ ವಿವಿಗೆ ತಿಳಿಸಿದ್ದಾರೆ.

ಮುಕ್ತ ಗಂಗೋತ್ರಿ ಆವರಣದಲ್ಲಿ ತರಬೇತಿ ಆರಂಭಿಸಲು ಸಿದ್ಧತೆ ಮಾಡಿಕೊಂಡಿರುವ ವಿಶ್ವವಿದ್ಯಾನಿಲಯವು, ಅಧಿಸೂಚನೆ ಮೂಲಕ ಪ್ರವೇಶಾತಿ ಪ್ರಕ್ರಿಯೆ ಆರಂಭಿಸಲಿದೆ. ಈ ಕುರಿತು ಪತ್ರಿಕೆಗಳಿಗೆ ಮಾಹಿತಿಯನ್ನು ಕರಾಮುವಿ ಕುಲಪತಿ ಪ್ರೊ. ಎಸ್. ವಿದ್ಯಾಶಂಕರ್ ಅವರು ಹಂಚಿಕೊಂಡಿದ್ದಾರೆ.

ದೂರ ಶಿಕ್ಷಣಕ್ಕೆ ಸೀಮಿತವಾಗದೇ ವಿದ್ಯಾರ್ಥಿಗಳಿಗೆ ಕೌಶಲ ತರಬೇತಿ ನೀಡಲು ವಿಶ್ವವಿದ್ಯಾನಿಲಯ ಸಜ್ಜುಗೊಂಡಿದೆ. ಸರ್ಕಾರವು ಸಿಎಂಕೆವೈಸಿಯಡಿ ತರಬೇತಿ ನೀಡಲು ಕಾರ್ಯಾದೇಶ ನೀಡಿರುವುದರಿಂದ ಲಭ್ಯ ಮೂಲ ಸೌಲಭ್ಯಗಳನ್ನು ಬಳಸಿಕೊಂಡು ಪ್ರಸಕ್ತ ಸಾಲಿನಿಂದಲೇ ಕಾರ್ಯಕ್ರಮ ಆರಂಭಿಸಲಾಗುವುದು. ಕೌಶಲ ಅಭಿವೃದ್ಧಿ ತರಬೇತಿಗೆ ಹೆಚ್ಚು ಬೇಡಿಕೆ ಇರುವುದರಿಂದ ಶೀಘ್ರ ಅಧಿಸೂಚನೆ ಹೊರಡಿಸಿ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸಲಾಗುವುದೆಂದು ಕುಲಪತಿ ಪ್ರೊ. ಎಸ್. ವಿದ್ಯಾಶಂಕರ್ ತಿಳಿಸಿದ್ದಾರೆ.

## ಗುಣಮಟ್ಟವಿಲ್ಲದ ಔಷಧ/ ಕಾಂತಿವರ್ಧಕ ಮಾರಾಟ ನಿಷೇಧ

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

ಕರ್ನಾಟಕ ಔಷಧ ಪರೀಕ್ಷಾ ಪ್ರಯೋಗಾಲಯದ ಸರ್ಕಾರಿ ವಿಶ್ಲೇಷಕರು, ಪ್ಯಾಂಟೋಪ್ರಜೋಲ್ ಟ್ಯಾಬ್ಲೆಟ್ಸ್ ಐ.ಪಿ. (ಪಚಿತರ್–40), ಪ್ಯಾಂಟೋಪ್ರಜೋಲ್ ಸೋಡಿಯಂ ಗ್ಯಾಸ್ಟ್ರೋ ರಿಸಿಸ್ಟೆಂಟ್ ಟ್ಯಾಬ್ಲೆಟ್ಸ್ ಐ.ಪಿ (ಮಯುಪನ್ ಟ್ಯಾಬ್ಲೆಟ್ಸ್), ಮೇಯುಟೆಲ್ – ಟ್ರಿಯೋ (ಟೆಲ್‌ಮಿಸರ್‌ಟನ್, ಅಮ್ಲೋಡಿಫೈನ್ & ಹೈಡ್ರೋಕ್ಲೋರೋಥೈಜಡ್ ಟ್ಯಾಬ್ಲೆಟ್ಸ್), ವಿಟಮಿನ್ 'ಸಿ' ಟ್ಯಾಬ್ಲೆಟ್ಸ್ ಐ.ಪಿ 500ಎಂಜಿ, ಸಾಗರ್ ಬ್ಲಾಕ್ ಡಿಸ್‌ಇನ್‌ಫೆಕ್ಟಮಟ್ ಫಿನೈಲ್ (ಫಿನೈಲ್), ವಿಟಮಿನ್ 'ಸಿ' ಟ್ಯಾಬ್ಲೆಟ್ಸ್ ಐ.ಪಿ 500ಎಂಜಿ, ಗ್ಲಿಂಟ್ ಹ್ಯಾಂಡ್ ಕ್ಲೆನ್ಸರ್, ಗೋ ಫ್ರೀ ಹ್ಯಾಂಡ್ ಸ್ಯಾನಿಟೈಸರ್ (ಇಸೋಪ್ರೋಫೈಲ್ ಅಲ್ಕೋಹಾಲ್ ಎಮೋಲಿಯಂಟ್ & ಮಾಯಿಶ್ಚರೈಸರ್ ಹ್ಯಾಂಡ್ ರಬ್, ಆಮ್ಕ್ಲಾವೆನಿಕ್ ಡ್ರೈ ಸಿರಪ್ (ಅಮೋಕ್ಸಿಸಿಲಿನ್ & ಪೋಟ್ಯಾಷಿಯಂ ಕ್ಲಾವುಲನೇಟ್ ಓರಲ್ ಸಸ್ಪೆನ್‌ಶನ್ ಐಪಿ), ಟೊರ್‌ಟಾಪ್–40 (ಪ್ಯಾಂಟೋಪ್ರಜೋಲ್ ಗ್ಯಾಸ್ಟ್ರೋ–ರಿಸಿಸ್ಟೆಂಟ್ ಟ್ಯಾಬ್ಲೆಟ್ಸ್ ಐಪಿ), ಪ್ಯಾಂಟೋಪ್ರಜೋಲ್ ಗ್ಯಾಸ್ಟ್ರೋ –ರಿಸಿಸ್ಟೆಂಟ್ & ಡಮ್‌ಫೆರಿಡನ್ ಸಸ್ಟೈನಡ್ – ರಿಲೀಸ್ ಕ್ಯಾಪ್ಸೂಲ್ಸ್ ಐಪಿ (ಪ್ಯಾಜ್‌ಗಸ್ ಡಿಎಸ್‌ಆರ್), ಔಷಧಿಗಳು / ಕಾಂತಿವರ್ಧಕ ಔಷಧಿ ವ್ಯಾಪಾರಿಗಳು, ಸಗಟು ವ್ಯಾಪಾರಿಗಳು, ಸಗಟು ಔಷಧ ಮಾರಾಟಗಾರರು, ವೈದ್ಯರು, ಆಸ್ಪತ್ರೆ ಮತ್ತು ನರ್ಸಿಂಗ್ ಹೋಂನವರು ದಾಸ್ತಾನು ಮಾಡುವುದಾಗಲೀ, ಮಾರಾಟ ಮಾಡುವುದಾಗಲೀ, ಅಥವಾ ಉಪಯೋಗಿಸುವುದಾಗಲೀ ಮಾಡಬಾರದು ಹಾಗೂ ಯಾರಾದರೂ ಔಷಧಿಗಳ ದಾಸ್ತಾನನ್ನು ಹೊಂದಿದ್ದಲ್ಲಿ ಕೂಡಲೇ ಸಂಬಂಧಪಟ್ಟ ಕ್ಷೇತ್ರದ ಔಷಧ ಪರಿವೀಕ್ಷಕರು ಅಥವಾ ಸಹಾಯಕ ನಿಯಂತ್ರಕರ ಗಮನಕ್ಕೆ ತರಬೇಕು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಆಚಾರ ಹಾಲಪ್ಪ ಬಸಪ್ಪ ಅವರು ಸೆಪ್ಟೆಂಬರ್ 16 ಮತ್ತು 17 ರಂದು  ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸೆಪ್ಟೆಂಬರ್ 18 ರಂದು "ಜಲ ಸ್ಪಂದನ" ಕಾರ್ಯಕ್ರಮ

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

ಬೆಂಗಳೂರು ಜಲಮಂಡಳಿಯು ನೀರು ಮತ್ತು ಒಳಚರಂಡಿಗೆ ಸಂಬಂಧಿಸಿದಂತೆ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸಲು ಪ್ರತಿ ಮೂರನೇ ಶನಿವಾರ ಜನ ಸ್ನೇಹಿ ಹೆಜ್ಜೆಯಾದ **"ಜಲ ಸ್ಪಂದನ" ಕಾರ್ಯಕ್ರಮವನ್ನು ದೂರವಾಣಿ ಮುಖಾಂತರ ಆಯೋಜಿಸಿದ್ದು, ಸೆಪ್ಟೆಂಬರ್ 18 ರಂದು ಬೆಳಿಗ್ಗೆ: 10:00 ರಿಂದ ಮಧ್ಯಾಹ್ನ 01:00** ರವರೆಗೆ 16 ವಿವಿಧ ಸ್ಥಳಗಳಲ್ಲಿ ಪ್ರಧಾನ ಮುಖ್ಯ ಅಭಿಯಂತರರು ಮತ್ತು ಅಪರ ಮುಖ್ಯ ಅಭಿಯಂತರರ ಸಮ್ಮುಖದಲ್ಲಿ "ಜಲ ಸ್ಪಂದನ"  ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ: **bwssb.gov.in** ನಲ್ಲಿ ಪಡೆದುಕೊಳ್ಳಬಹುದು. ಬೆಂಗಳೂರು ಜಲಮಂಡಳಿ ನೀರು ಮತ್ತು ಒಳಚರಂಡಿ ಮಂಡಳಿಯ  ಸಹಾಯವಾಣಿ ಸಂಖ್ಯೆ: **1916** ಹಾಗೂ ವಾಟ್ಸ್‌ಆಪ್ ಸಂಖ್ಯೆ:**8762228888** ಗೆ ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ನಗರಾಭಿವೃದ್ಧಿ ಸಚಿವರ ಪ್ರವಾಸ

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

ನಗರಾಭಿವೃದ್ಧಿ ಸಚಿವರು ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಎ.ಬಸವರಾಜ (ಬೈರತಿ) ಅವರು ಸೆಪ್ಟೆಂಬರ್ 17, 18, ಹಾಗೂ 19 ರಂದು ದಾವಣಗೆರೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಸೆಪ್ಟೆಂಬರ್ 20 ರಂದು  ಕೇಂದ್ರ ಸ್ಥಾನಕ್ಕೆ ಆಗಮಿಸಲಿದ್ದಾರೆ ಎಂದು  ಅಧಿಕೃತ ಪ್ರಕಟಣೆ ತಿಳಿಸಿದೆ.

## ಮನೆಯಂಗಳದಲ್ಲಿ ಮಾತುಕತೆ 216 ನೇ ಸಂಚಿಕೆ ಕಾರ್ಯಕ್ರಮ

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಮನೆಯಂಗಳದಲ್ಲಿ ಮಾತುಕತೆ ಎಂಬ ವೈಶಿಷ್ಟ್ಯಪೂರ್ಣ ಕಾರ್ಯಕ್ರಮವನ್ನು ಸೆಪ್ಟೆಂಬರ್ 18 ರಂದು ಶನಿವಾರ ಸಂಜೆ 4.00 ಗಂಟೆಗೆ ಕನ್ನಡ ಭವನದ ನಯನ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ತಿಂಗಳ ಅತಿಥಿಗಳಾಗಿ ಖ್ಯಾತ ರಂಗಭೂಮಿ ಕಲಾವಿದರಾದ ಡಾ.ಬಿ.ವಿ.ರಾಜಾರಾಂ ಅವರು ಆಗಮಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಅಂತಾರಾಷ್ಟ್ರೀಯ ಸಿರಿ ಧಾನ್ಯಗಳ ವರ್ಷ –2023ರ ಉದ್ಘಾಟನಾ ಸಮಾರಂಭ

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅಂತಾರಾಷ್ಟ್ರೀಯ ಸಿರಿ ಧಾನ್ಯಗಳ ವರ್ಷ –2023ರ ಉದ್ಘಾಟನಾ ಸಮಾರಂಭವು ಸೆಪ್ಟೆಂಬರ್ 17, 2021 ರಂದು ಬೆಳಿಗ್ಗೆ 10.00 ಗಂಟೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಆವರಣದಲ್ಲಿರುವ ಕುವೆಂಪು ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕೇಂದ್ರ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯದ ರಾಜ್ಯ ಮಂತ್ರಿಗಳಾದ ಕೈಲಾಶ ಚೌಧರಿ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಸ್.ರಾಜೇಂದ್ರ ಪ್ರಸಾದ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಕೃಷಿ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರಾದ ಡಾ. ಕೆ.ಸಿ.ನಾರಾಯಣಸ್ವಾಮಿ, ವಿಸ್ತರಣಾ ನಿರ್ದೇಶಕರಾದ ಡಾ.ಎನ್. ದೇವಕುಮಾರ್, ಸಂಶೋಧನಾ ನಿರ್ದೇಶಕರಾದ ಡಾ.ವೈ.ಜಿ. ಷಡಕ್ಷರಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಜೂಮ್ ಸಭೆಯ ಲಿಂಕ್ :
https://us02web.zoom.us/1/86105563485pwd=NnZMNWZvZU955tvNnRWETFVU2htdz09
ಸಭೆಯ ಐ.ಡಿ. 86105563485 ಪಾಸ್‌ಕೋಡ್ : 123
ಹೆಚ್ಚಿನ ಮಾಹಿತಿಗಾಗಿ ಡಾ. ಕೆ. ಶಿವರಾಮು, ಪ್ರಾಧ್ಯಾಪಕರು, ಹಾಗೂ ಹಿರಿಯ ವಾರ್ತಾತಜ್ಞರು, ಮೊಬೈಲ್ ಸಂ. 9972035456 ಮತ್ತು ಡಾ. ಎಂ.ಎ. ಮೂರ್ತಿ, ಸಹಾಯಕ ಪ್ರಾಧ್ಯಾಪಕರು ಮೊಬೈಲ್ ಸಂ. 9535355329 ಇವರನ್ನು ಸಂಪರ್ಕಿಸುವುದು.

## ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ

ಬೆಂಗಳೂರು, ಸೆಪ್ಟೆಂಬರ್ 16, (ಕರ್ನಾಟಕ ವಾರ್ತೆ):

**ದಿನಾಂಕ: 16.9.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 54 | ತೃಪ್ತಿಕರ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 38 | ಉತ್ತಮ | $PM_{10}$ |
| 3 | ಕವಿಕ, ಮೈಸೂರುರಸ್ತೆ | 82 | ತೃಪ್ತಿಕರ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 55 | ತೃಪ್ತಿಕರ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 80 | ತೃಪ್ತಿಕರ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 67 | ತೃಪ್ತಿಕರ | $PM_{10}$ |

| | | | | |
|---|---|---|---|---|
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 52 | ತೃಪ್ತಿಕರ | $PM_{10}$ |
| **(16.9.2021 at 11.05 AM)** | | | | |
| 8 | BWSSB,ಕಾಡಬೀಸನಹಳ್ಳಿ | 66 | ತೃಪ್ತಿಕರ | $PM_{10}$ |
| 9 | ಪೀಣ್ಯ | 75 | ತೃಪ್ತಿಕರ | $PM_{10}$ |
| 10 | ಬಿಟಿಎಂ ಲೇಔಟ್ | 63 | ತೃಪ್ತಿಕರ | CO |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 16.9.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 54 | Satisfactory | $PM_{10}$ |
| 2 | Jayanagar 5th Block, Shalini ground | 38 | Good | $PM_{10}$ |
| 3 | KAVIKA, Mysore Road | 82 | Satisfactory | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 55 | Satisfactory | $PM_{10}$ |
| 5 | HSR Layout, near Central Silkboard | 80 | Satisfactory | $PM_{10}$ |
| 6 | City Railway Station, Magestic, Bengaluru | 67 | Satisfactory | $PM_{10}$ |

| | | | | |
|---|---|---|---|---|
| 7 | Saneguruvanahalli, NisargaBhavan, KSPCB, Shivanagara | 52 | Satisfactory | $PM_{10}$ |
| **(16.9.2021 at 11.05 AM)** | | | | |
| 8 | BWSSB, Kadabesanahalli | 66 | Satisfactory | $PM_{10}$ |
| 9 | Peenya | 75 | Satisfactory | $PM_{10}$ |
| 10 | BTM Layout | 63 | Satisfactory | CO |

| **Category (Range)** | **Possible Health Impacts** | **Category (Range)** | **Possible Health Impacts** |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |